**ಸಾಧಕತ್ವಂ ಸತಸ್ತೇನ ಸಾಕ್ಷಿಣಾ ಸಿದ್ಧಿಮಿಚ್ಛತಾ ।**
**ಸ್ವೀಕೃತಂ, ಹ್ಯವಿಶೇಷಸ್ಯ ಸಾಧ್ಯಾ ಸಾಧಕತಾ ಪುನಃ ।**
**ತಚ್ಚಾವಿಶೇಷಮಾನೇನ ಸಾಧ್ಯಮಿತ್ಯನವಸ್ಥಿತಿಃ ॥**

**ಅನ್ವಯಾರ್ಥ :**

ಸಾಕ್ಷಿಣಾ= ಸಾಕ್ಷೀಂದ್ರಿಯದಿಂದ, ಸಿದ್ಧಿಂ= ಅಜ್ಞಾನದ ಸಿದ್ಧಿಯನ್ನು, ಇಚ್ಛತಾ= ಬಯಸುವ, ತೇನ= ಮಾಯಾವಾದಿಯಿಂದ, ಸತಃ= ಸತ್ಯವಾದ ಪ್ರಮಾಣಕ್ಕೆ, ಸಾಧಕತ್ವಂ= ತತ್ತ್ವಸಾಧಕತ್ವವು, ಸ್ವೀಕೃತಂ= ಒಪ್ಪಲ್ಪಟ್ಟಿದೆ.

ಹ್ಯವಿಶೇಷಸ್ಯ- ಹಿ+ಅವಿಶೇಷಸ್ಯ= ಯಾವ ಗುಣಧರ್ಮಗಳು ಇಲ್ಲದ, ಸಾಧಕತಾ= ವಿಷಯಸಾಧಕತ್ವವು, ಸಾಧ್ಯಾ= ಅದ್ವೈತವಾದಿಯಿಂದಲೇ ಸಮರ್ಥಿಸಲ್ಪಡಬೇಕು.

ತಚ್ಚ= ಯಾವ ಗುಣಧರ್ಮಗಳು ಇಲ್ಲದ ಪ್ರಮಾಣಕ್ಕೆ ಅರ್ಥಸಾಧಕತ್ವವನ್ನು, ಪುನಃ= ಮತ್ತೆ, ಅವಿಶೇಷಮಾನೇನ= ನಿರ್ವಿಶೇಷ ಪ್ರಮಾಣದಿಂದ, ಸಾಧ್ಯಂ= ಸಾಧಿಸಲ್ಪಡಬೇಕು, ಇತಿ= ಹೀಗೆ, ಅನವಸ್ಥಿತಿಃ= ಅನವಸ್ಥಾ ದೋಷವು ಬರುತ್ತದೆ.

**ಭಾವಾರ್ಥ :**

ಅಸತ್ಯವು ಸಾಧಕವಲ್ಲ ಎಂದು ದ್ವೈತವಾದ. ಸತ್ಯವು ಸಾಧಕವಲ್ಲ, ಅಸತ್ಯವೇ ಸಾಧಕ ಎಂದು ಅದ್ವೈತವಾದ. ಹೀಗೆ ದ್ವೈತಾದ್ವೈತದಲ್ಲಿ ಸಾಮರಸ್ಯವೇ ಇಲ್ಲದುದರಿಂದ ಅವರಿಬ್ಬರಲ್ಲಿ ಚರ್ಚೆ ನಡೆಯುವುದಾದರೂ ಹೇಗೆ? ಈ ಆಕ್ಷೇಪಕ್ಕೆ ಉತ್ತರ ಪ್ರಕೃತ ಅನುವ್ಯಾಖ್ಯಾನದಲ್ಲಿದೆ-

ಅದ್ವೈತವಾದ ಅಸತ್ಯವು ಸಾಧಕ- ತತ್ತ್ವವನ್ನು ಸಾಧಿಸಿಕೊಡಬಲ್ಲುದು ಎನ್ನುತ್ತದೆ. ನಾವು ಅದನ್ನು ಒಪ್ಪುವುದಿಲ್ಲ. ನಾವು ಸತ್ಯವೇ ಸಾಧಕ ಎನ್ನುತ್ತೇವೆ. ಇದನ್ನು ಅದ್ವೈತವಾದವು ಒಪ್ಪಿದೆ. ಹೇಗೆಂದರೆ- ಈ ಜಗತ್ತಿನ ಕಲ್ಪನೆಗೆ ಆಧಾರವಾದುದು. 'ಅವಿದ್ಯೆ' ಅದಕ್ಕೆ ಸಾಧಕವಾದುದು, ಅದನ್ನು ಇದೆ ಎಂದು ತಿಳಿಸುವುದು ಸಾಕ್ಷಿ. ಸಾಕ್ಷಿ ಎಂದರೆ ಆತ್ಮ. ಆತ್ಮ ಸತ್ಯ. ಹೀಗೆ ಸತ್ಯವಾದ ಸಾಕ್ಷೀಂದ್ರಿಯ ಅವಿದ್ಯೆಗೆ ಸಾಧಕ ಎಂದು ಅದ್ವೈತವಾದವೂ ಒಪ್ಪಿಕೊಂಡಿದೆ.

ಆದ್ದರಿಂದ ಅದ್ವೈತವಾದಕ್ಕೆ ಸಮ್ಮತವಾದುದನ್ನು ದ್ವೈತವಾದ ನಿರಾಕರಿಸಿದರೂ ದ್ವೈತವಾದಕ್ಕೆ ಸಮ್ಮತವಾದುದನ್ನು ಅದ್ವೈತವಾದ ಒಪ್ಪಿಕೊಂಡಿದೆ.

ಸಾಕ್ಷಿಯು ಅಜ್ಞಾನಕ್ಕೆ ಸಾಧಕ ಎಂದು ಅದ್ವೈತವಾದ ಹೇಳುತ್ತದೆ. ವಸ್ತುತಃ ಅದೂ ಸರಿಯಲ್ಲ. ಏಕೆಂದರೆ ಶುದ್ಧ ಆತ್ಮಸ್ವರೂಪವಾದ ಸಾಕ್ಷಿಯು ನಿರ್ವಿಶೇಷ ಬ್ರಹ್ಮರೂಪವಾದುದು. ಸಾಧಕವಾದ ಪ್ರಮಾಣಗಳಲ್ಲಿ ಏನಾದರೊಂದು ವಿಶೇಷ ಇರಲೇಬೇಕು. ಯಾವ ಗುಣಧರ್ಮಗಳೂ ಇಲ್ಲದ ತತ್ತ್ವ 'ಮೊಲದ ಕೋಡಿನಂತೆ'. ಅದು ಸಾಧಕವೇ ಆಗಲಾರದು.

'ನಿರ್ವಿಶೇಷವಾದ ಸಾಕ್ಷಿಯೂ ಸಾಧಕವಾಗಿದೆ' ಎಂಬ ತತ್ತ್ವವನ್ನು ಸಾಧಿಸಿ ತೋರಿಸುತ್ತೇವೆ, ಎಂದು ಅದ್ವೈತವಾದ ಹೇಳುವಂತಿಲ್ಲ. ಏಕೆಂದರೆ, ಅದಕ್ಕೆ ಆಧಾರವನ್ನಾಗಿ ಮತ್ತೊಂದು ನಿರ್ವಿಶೇಷ ಪ್ರಮಾಣವನ್ನೇ ತೋರಿಸಬೇಕು. ಅಲ್ಲೂ ಮತ್ತೆ ಹಿಂದಿನದೇ ಸಮಸ್ಯೆ. ಹೀಗೆ ಅನವಸ್ಥಾ ದೋಷ.

**ಅನಂಗೀಕುರ್ವತಾಂ ವಿಶ್ವಸತ್ಯತಾಂ ತನ್ನ ವಾದಿತಾ ।**
**ತಸ್ಮಾದ್ ವ್ಯವಹೃತಿಃ ಸರ್ವಾ ಸತ್ಯೇತ್ಯೇವ ವ್ಯವಸ್ಥಿತಾ ॥**

**ಅನ್ವಯಾರ್ಥ :**

ತತ್= ಈ ಕಾರಣದಿಂದ, ವಿಶ್ವಸತ್ಯತಾಂ= ಪ್ರಪಂಚಕ್ಕೆ ಸತ್ಯತ್ವವನ್ನು, ಅನಂಗೀಕುರ್ವತಾಂ= ಒಪ್ಪದೆ, ವಿಶ್ವಕ್ಕೆ ಮಿಥ್ಯಾತ್ವವನ್ನು ಹೇಳುವ 'ನೇಹ ನಾನಾಸ್ತಿ ಕಿಂಚನ' ಇತ್ಯಾದಿ ವೇದವಾಕ್ಯಗಳಿಗೆ, ನ ವಾದಿತಾ= ಪ್ರಮೇಯಸಾಧಕತ್ವವು ಇಲ್ಲ, ಅಥವಾ, ವಿಶ್ವಸತ್ಯತಾಂ ಅನಂಗೀಕುರ್ವತಾಂ= ಪ್ರಪಂಚವು ಸತ್ಯ ಎಂದು ಒಪ್ಪದ ಮಾಯಾವಾದಿಗಳಿಗೆ, ವಾದಿತಾ= ವಾದದಲ್ಲಿ ಪ್ರವೇಶವು, ನ= ಇಲ್ಲ.

ತಸ್ಮಾತ್= ವಾದಪ್ರವೇಶವನ್ನು ಬಯಸುವುದರಿಂದಾಗಿ, ಸರ್ವಾ= ಎಲ್ಲಾ, ವ್ಯವಹೃತಿಃ= ವಾದಕ್ಕೆ ಕಾರಣವಾದ ಪ್ರಮಾಣಾದಿಗಳು, ಸತ್ಯೇತ್ಯೇವ= ಸತ್ಯವೆಂದೇ, ವ್ಯವಸ್ಥಿತಾ= ಸಿದ್ಧವಾಗುವುದು.

**ಭಾವಾರ್ಥ :**

'ನೇಹ ನಾನಾಸ್ತಿ ಕಿಂಚನ' ಎಂಬ ವೇದವಾಕ್ಯ ಬ್ರಹ್ಮನನ್ನು ಬಿಟ್ಟು ಉಳಿದಿದ್ದೆಲ್ಲ ಅಸತ್ಯವೆಂದು ಹೇಳಿದರೆ ತಾನೂ ಅಸತ್ಯವಾಗುವುದರಿಂದ ಅಂತಹ ವಾಕ್ಯ ಯಾವ ತತ್ತ್ವವನ್ನೂ ಸಾಧಿಸಲಾರದಾದೀತು. ಅಥವಾ,

ವಿಶ್ವಮಿಥ್ಯಾತ್ವವನ್ನು ಒಪ್ಪಿದರೆ ಮಾಯಾವಾದಿಗಳಿಗೆ ಚರ್ಚೆಯಲ್ಲಿ ಪ್ರವೇಶವೇ ಇಲ್ಲದಾದೀತು! ಏಕೆಂದರೆ, ಪ್ರತಿವಾದಿಗಳೊಂದಿಗೆ ಚರ್ಚೆ ನಡೆಸಬೇಕಾದರೆ ಒಂದು ಆಧಾರವನ್ನು- ಪ್ರಮಾಣವನ್ನು ಕೊಡಬೇಕು; ಪ್ರತಿವಾದಿ ಹೇಳಿದ ಪ್ರಮಾಣಗಳಿಗೆ ದೋಷವನ್ನು ಹೇಳಬೇಕು. ಆದರೆ ಅವೆಲ್ಲವೂ ಅಸತ್ಯವಾದರೆ ವಾದ ನಡೆಸುವುದು ಹೇಗೆ?

ಆದ್ದರಿಂದ ಪ್ರಪಂಚವನ್ನು ಅಸತ್ಯವೆಂದು ಹೇಳುವುದು ಸರಿಯಲ್ಲ.

**ವ್ಯಾವಹಾರಿಕಮೇತಸ್ಮಾತ್ ಸತ್ಯಮಿತ್ಯೇವ ಚಾಗತಮ್ ।**

**ಅನ್ವಯಾರ್ಥ :**

ತಸ್ಮಾತ್= ಪ್ರಮಾಣವು ಸತ್ಯವಾಗಿರುವುದರಿಂದ, ವ್ಯಾವಹಾರಿಕಂ= ಪ್ರಮಾಣವು ಸಮರ್ಥಿಸುವ ದುಃಖಾದಿ ಪ್ರಪಂಚವೂ, ಸತ್ಯಮಿತ್ಯೇವ= ಸತ್ಯವೆಂದೇ, ಆಗತಂ= ಆಯಿತು.

**ಭಾವಾರ್ಥ :**

ಪ್ರಮಾಣವು ಸತ್ಯವೆಂದು ಹೇಳಲೇಬೇಕಾದ ಮೇಲೆ ಆ ಪ್ರಮಾಣ ಪ್ರತಿಪಾದಿಸುವ ವಿಷಯವೂ ಸತ್ಯವೇ ಆಗಬೇಕು.

(ಇಲ್ಲಿ ಟೀಕಾಚಾರ್ಯರು ಬೌದ್ಧರ ಕಥಕತಾವಾದವನ್ನು ಪ್ರಸ್ತುತ ಪಡಿಸಿದ್ದಾರೆ. ಸುಧಾದಲ್ಲಿ ಕ್ಲಿಷ್ಟವಾದ ಭಾಗಗಳಲ್ಲಿ ಇದೂ ಒಂದು.)